ದಿನಾಂಕಃ12-08-2017. ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು

ಪಾಟೀ ಸವಾಲುಃ ಶ್ರೀ ಆರ್ ಕೆ ಎಂ ವಕೀಲರಿಂದಃ

5. ನಾನು ರೋಮನ್ ಕ್ಯಾಥೋಲಿಕ್ ಕ್ರಿಶ್ಚಿಯನ್ ಆಗಿರುತ್ತೇನೆ. ಫಿಲೋಮಿನಾ ಫೆರ್ನಾಂಡೀಸ್‌ರವರು ನನ್ನ ಗಂಡನ ಅಕ್ಕನ ಮಗಳು ಆಗಿರುತ್ತಾಳೆ. ಅವಳ ತಾಯಿಯ ಹೆಸರು ಫಾಸ್ಕಿನ್ ಫೆರ್ನಾಂಡೀಸ್ ಆಗಿರುತ್ತದೆ. ನನ್ನ ಗಂಡನಿಗೆ ಮೂವರು ಸಹೋದರಿಯರು ಮತ್ತು 4 ಜನ ಸಹೋದರರು ಇರುತ್ತಾರೆ. ಆರೋಪಿಯು ಪರಿಶಿಷ್ಟ ಜಾತಿಗೆ ಸೇರಿರುತ್ತಾರೆ. ಮೇಲೆ ಹೇಳಿದ ಫಿಲೋಮಿನಾರವರು ಆರೋಪಿಯ ಅಣ್ಣ ಸದಾಶಿವನನ್ನು ವಿವಾಹ ಆಗಿರುತ್ತಾರೆ. ಆದ್ದರಿಂದ ಆರೋಪಿ ನನಗೆ ಸಂಬಂಧಿಯಾಗಿರುತ್ತಾರೆ.

6. ನನ್ನ ಪತಿ 2009ರಲ್ಲಿ ಮೃತಪಟ್ಟಿರುತ್ತಾರೆ. ನನ್ನ ಗಂಡನ ಮನೆಯ ಸ್ಥಿರಾಸ್ತಿಗಳು ಇದ್ದು ಅದರ ಬಗ್ಗೆ ನನಗೆ ಸರಿಯಾಗಿ ಗೊತ್ತಿಲ್ಲ. ನನ್ನ ಪತಿ ಜೀವಂತ ಇದ್ದಾಗ ಮತ್ತು ಅವರ ಮರಣದ ನಂತರ ನಾನು ವಿದೇಶಗಳಾದ ಕುವೈಟ್, ಬಹರೇನ್ ಮತ್ತು ಮಸ್ಕತ್‌ಗೆ ಮನೆ ಕೆಲಸಕ್ಕೆ ಹೋಗಿರುತ್ತೇನೆ. ನಾನು ಪಡಿತರ ಚೀಟಿ ಪಡೆಯಲು ಅರ್ಜಿ ಸಲ್ಲಿಸಿರುತ್ತೇನೆ. ಘಟನೆಯ ದಿನ ನಾನು ಅರ್ಜಿಯ ಬಗ್ಗೆ ವಿಚಾರಿಸಲು ಗ್ರಾಮ ಪಂಚಾಯತ್‌ಗೆ ಹೋಗಿರುತ್ತೇನೆ. ಸದ್ರಿ ಅರ್ಜಿಯ ಪ್ರತಿ ನನ್ನ ಬಳಿ ಇರುವುದಿಲ್ಲ. ಪೋಲೀಸರು ನನ್ನ ಸಮಕ್ಷಮ ನಾನು ನೀಡಿದ ಅರ್ಜಿಯನ್ನು ಜಪ್ತು ಮಾಡಿರುವುದಿಲ್ಲ. ಪಂಚಾಯತ್‌ನಲ್ಲಿ ಆರೋಪಿ ಅಲ್ಲದೇ ಇತರ ಐದಾರು ಜನ ಸಿಬ್ಬಂದಿಗಳು ಇದ್ದರು. ಆ ಸಮಯದಲ್ಲಿ ಗ್ರಾಮಸ್ಥರು ಸಾಕಷ್ಟು ಜನ ಇದ್ದರು. ಬೆಳಿಗ್ಗೆ 11.00ಗಂಟೆ ಸಮಯ ತುಂಬಾ ಜನ ಇರುವಂತಹ ಸಮಯ ಆಗಿರುತ್ತದೆ.

7. ನಾನು ಆರೋಪಿಯು ತೋರಿಸಿದ ಅಶ್ಲೀಲ ಚಿತ್ರಣವನ್ನು ಒಂದು ಕ್ಷಣ ನೋಡಿ ಮುಖ ತಿರುಗಿಸಿರುತ್ತೇನೆ. ಅದರಲ್ಲಿ ಏನನಿತ್ತು ಎಂದು ಹೇಳಲು ಸಾಧ್ಯವಿಲ್ಲ ಮತ್ತು ಪೋಲೀಸರಲ್ಲಿ ಅದನ್ನು ಹೇಳಿರುವುದಿಲ್ಲ. ಆರೋಪಿಯ ಮೊಬೈಲ್ ಯಾವ ಕಂಪೆನಿಯದ್ದೆಂದು ಹೇಳಲು ನನಗೆ ಸಾಧ್ಯವಿಲ್ಲ. ಸದ್ರಿ ಮೊಬೈಲ್ ಟಚ್ ಸ್ಕ್ರೀನ್ ಅಥವಾ ಕೀ ಪ್ಯಾಡ್ ಆಗಿರುವ ಮೊಬೈಲಾ ಎಂದು ನನಗೆ ಹೇಳಲು ಸಾಧ್ಯವಿಲ್ಲ. ನಾನು ಆ ಕ್ಷಣದಲ್ಲಿ ಅಲ್ಲಿ ಗಲಾಟೆ ಮಾಡಿರುವುದಿಲ್ಲ.

8. ಘಟನೆ ನಡೆಯುವಾಗ ಆರೋಪಿಯು ಕುಳಿತುಕೊಂಡಿದ್ದು ಅವರ ಮುಂದೆ ಟೇಬಲ್ ಸಹ ಇತ್ತು. ಟೇಬಲ್ ಎದುರು ಕುಳಿತುಕೊಳ್ಳಲು ಕುರ್ಚಿ ಇರಲಿಲ್ಲ. ಆ ದಿನ ನಾನು ಚೂಡೀದಾರ ಧರಿಸಿದ್ದೆನು. ಆರೋಪಿಯ ಕೃತ್ಯದಿಂದ ನನ್ನ ದೇಹ ಅಥವಾ ಬಟ್ಟೆಯ ಮೇಲೆ ಯಾವುದೇ ಕುರುಹು ಉಂಟಾಗಿರುವುದಿಲ್ಲ. ಆರೋಪಿಯ ಅಣ್ಣ ಫಿಲೋಮಿನಾರವರನ್ನು ಬಹಳ ವರ್ಷದ ಹಿಂದೆ ಮದುವೆಯಾಗಿದ್ದನು. ನಾನು ಆರೋಪಿಯಿಂದ ಬಿಡಿಸಿಕೊಂಡು ಅಲ್ಲಿ ಕೂಗಿಕೊಂಡಿರುತ್ತೇನೆ. ಆ ಸಮಯದಲ್ಲಿ ನನ್ನ ಸಹಾಯಕ್ಕೆ ಯಾರು ಬಂದಿರುವುದಿಲ್ಲ. ನನ್ನ ಬಳಿ ಆ ಸಮಯದಲ್ಲಿ ಮೊಬೈಲ್ ದೂರವಾಣಿ ಇತ್ತು.

9. ಚಾ.ಸಾ.2ರವರು ಮೊದಲು ಗ್ರಾಮ ಪಂಚಾಯತ್‌ನಲ್ಲಿ ಕೆಲಸ ಮಾಡುತ್ತಿದ್ದರು. ನಾನು ಈ ಘಟನೆಯಾದ ಒಂದು ವಾರದ ನಂತರ ಪಿರ್ಯಾದನ್ನು ದಾಖಲಿಸಿರುತ್ತೇನೆ. ಪ್ರಥಮವಾಗಿ ನಾನು ಈ ವಿಚಾರವನ್ನು ಚಾ.ಸಾ.2ರವರಿಗೆ ತಿಳಿಸಿರುತ್ತೇನೆ. ದಿ.26.7.2015ರಂದು ಆ ಬಗ್ಗೆ ತಿಳಿಸಿರುತ್ತೇನೆ. ನಾನು ಪೊಲೀಸರಲ್ಲಿ ಮರುಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಆ ದಿನ ನಾನು ಪಡಿತರ ಚೀಟಿ ಮತ್ತು ಜಾತಿ ಆದಾಯ ಪ್ರಮಾಣಪತ್ರವನ್ನು ಪಡೆಯಲು ಗ್ರಾಮ ಪಂಚಾಯತ್‌ಗೆ ಆ ದಿನ ಹೋಗಿದ್ದೇ ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ಗಂಡನ ಮನೆಯ ಎಲ್ಲಾ ಆಸ್ತಿ ನನಗೆ ಸೇರಬೇಕು ಎಂದುಕ ಆರೋಪಿ ನನ್ನ ಸಂಬಂಧಿಕನಾಗಿದ್ದರಿಂದ ಆತನಲ್ಲಿ ಒತ್ತಾಯ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಅದಕ್ಕೆ ಆರೋಪಿಯು ಉತ್ತರಾಧಿಕಾರತ್ವ ಪ್ರಮಾಣ ಪತ್ರ ತಂದು ಕೊಡುವಂತೆ ಹೇಳಿದ್ದರು ಎಂದರೆ ಸರಿಯಲ್ಲ. ಆ ಕಾರಣಕ್ಕೆ ನಾನು ಮುನಿಸಿಕೊಂಡು ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಈ ಪಿರ್ಯಾದಿಯು ಸುಳ್ಳು ಪಿರ್ಯಾದಿ ಆಗಿದ್ದರಿಂದ ಅದನ್ನು ದಾಖಲಿಸಲು ಸಮಯ ತೆಗೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

10. ಆರೋಪಿಯು ನಾನು ಹೇಳಿದಂತೆ ನನ್ನ ಜೊತೆ ಯಾವುದೇ ದುರ್ವತನೆ ಮಾಡಿದ್ದಿಲ್ಲ ಮತ್ತು ಮೊಬೈಲ್‌ನಲ್ಲಿ ಅಶ್ಲೀಲ ಚಿತ್ರವನ್ನು ತೋರಿಸಿದ್ದು ಇಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಯಾವುದೇ ಘಟನೆ ನಡೆದಿರಲಿಲ್ಲ ಎಂದರೆ ಸರಿಯಲ್ಲ. ಘಟನೆಯಾದ ನಂತರ ನಾನು ಆರೋಪಿಯ ಸದ್ರಿ ಮೊಬೈಲ್‌ನ್ನು ನೋಡಿರುವುದಿಲ್ಲ. ಮಹಜರಿಗೆ ರುಜುವನ್ನು ಪೊಲೀಸ್ ಠಾಣೆಯಲ್ಲಿ ಮಾಡಿದ್ದು

ಮತ್ತು ಛಾಯಾಚಿತ್ರಗಳನ್ನು ಸೃಷ್ಟಿಸಿದ್ದು ಎಂದರೆ ಸರಿಯಲ್ಲ. ನನ್ನ ವೈಯಕ್ತಿಕ ಕಾರಣಕ್ಕಾಗಿ ಲೈಂಗಿಕ ದೌರ್ಜನ್ಯ ಮಾಡಿರುತ್ತಾರೆ ಎಂದು ಕಾನೂನನ್ನು ದುರುಪಯೋಗ ಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ ಹೇ ಕೇ ಸ ಇ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಕುಂದಾಪುರ